ವಾರಪತ್ರಿಕೆ, ಸಂಪಾದಕ ಸಿರಿಮನೆ ನಾಗರಾಜ

ಖಾಸಗಿ ಪ್ರಸಾರಕ್ಕಾಗಿ ಕೊಪ್ಪ ೨-೫-೮೨ ಭಾನುವಾರ ೧೫

ಗೋಕಾಕ್ ವರದಿ ಪೂರ್ಣ ಜಾರಿಗೆ ಒತ್ತಾಯ

ಕೊಪ್ಪದಲ್ಲಿ ಸಭೆ, ಮೆರವಣಿಗೆ

ಕೊಪ್ಪ: ಗೋಕಾಕ್ ವರದಿಯ ಶಿಫಾರಸುಗಳನ್ನು ಪೂರ್ಣವಾಗಿ ಜಾರಿಗೆ ತರುವಂತೆ ಸರ್ಕಾರವನ್ನು ಒತ್ತಾಯಿಸಲು ಮೇ ೨ ರಂದು ಇಲ್ಲಿ ನಾಗರಿಕ ಸಭೆ ಮತ್ತು ಮೆರವಣಿಗೆ ನಡೆದವು.

ಇಲ್ಲಿನ 'ಅಂಕುರ ಬಳಗ' ಈ ಕಾರ್ಯಕ್ರಮ ಏರ್ಪಡಿಸಿತ್ತು. ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಪ್ರತಿನಿಧಿ ಹ. ಪ ಗಣಪತಿ ಪ್ರಭು ಹಾಗೂ ಇಲ್ಲಿನ ಪ್ರೌಢ ಶಾಲೆಯ ಕನ್ನಡ ಅಧ್ಯಾಪಕ ಎಸ್. ವಿ. ಮಲ್ಲಿಕಾರ್ಜುನ ಭಟ್ಟ ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಗೋಕಾಕ್ ಸಮಿತಿಯ ಶಿಫಾರಸುಗಳು, ಸರ್ಕಾರ ಈಗ ತೆಗೆದುಕೊಂಡಿರುವ ನಿರ್ಧಾರ ಮತ್ತು ಅದರ ಪರಿಣಾಮಗಳನ್ನು ಕುರಿತು ನಾಗರೀಕ ಸಭೆಯಲ್ಲಿ ವಿವರವಾಗಿ ಮಾತನಾಡಿದ ಎಸ್. ವಿ. ಮಲ್ಲಿಕಾರ್ಜುನ ಭಟ್ಟರು, ವರದಿಯ ಬಗೆಗಿನ ಪ್ರಚಲಿತ ಪ್ರಶ್ನೆಗಳನ್ನು ಪ್ರಸ್ತಾಪಿಸಿ, ಉತ್ತರಿಸಿದರು.

ಪ್ರೌಢ ಶಾಲೆಯ ಮಟ್ಟದಲ್ಲಿ ಕಲಿಸುವ ಕನ್ನಡ ಮತ್ತು ಆಗತಾನೇ ಕಲಿಕೆ ಶುರು ವಾಗುವ ಸಂಸ್ಕೃತಗಳ ಪಠ್ಯ ವಿಷಯದಲ್ಲಿ ಅಜಗಜಾಂತರ ವ್ಯತ್ಯಾಸವಿದ್ದು ಕನ್ನಡ ಅರಿಸುವ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ ಭೇದ ಆಗುತ್ತದೆಂಬ ವಾದವನ್ನು ಬದಿಗೊತ್ತಿ ಸಂಸ್ಕೃತ ೧೯೫೭ ರಿಂದ ಪ್ರಥಮ ಭಾಷೆಯಾಗಿ ಮುಂದುವರಿದುಕೊಂಡು ಬಂತು. ಪುನಃ ಈ ವಿರೋಧ ಜಾಸ್ತಿಯಾದಾಗ ೧೯೭೯ ರಲ್ಲಿ ದೇವರಾಜ ಅರಸು ಸರ್ಕಾರ ಸಂಸ್ಕೃತವನ್ನು ಪ್ರಥಮ ಭಾಷೆಯಿಂದ ತೆಗೆಯಿತು. 'ಸಂಸ್ಕೃತಕ್ಕೆ ಅನ್ಯಾಯ' ಎಂಬ ವಿರೋಧ ಎದ್ದು, ಹೊಸ ಸರ್ಕಾರ ಆ ಆಜ್ಞೆಯನ್ನು ರದ್ದುಮಾಡಿ, ಶಿಕ್ಷಣ ತಜ್ಞರಿಂದ ಕೂಡಿದ ಗೋಕಾಕ್ ಸಮಿತಿಯನ್ನು ನೇಮಿಸಿ ಶಿಕ್ಷಣದಲ್ಲಿ ಸಂಸ್ಕೃತದ ಅಗತ್ಯವಿದ್ದರೆ ಕನ್ನಡಕ್ಕೆ ಅನ್ಯಾಯವಾಗದಂತೆ ಅದರ ಸ್ಥಾನ ನಿರ್ಧರಿಸಲು ಆದೇಶಿಸಿತು.

ಸಾಕಷ್ಟು ಅಭಿಪ್ರಾಯ ಸಂಗ್ರಹ ಮತ್ತು ವಿಚಾರ ವಿಮರ್ಶೆ ನಡೆಸಿದ ಸಮಿತಿ ಭಾಷೆಯ ಬಗ್ಗೆ ವಿಸ್ತಾರವಾದ ನೀತಿಯೊಂದನ್ನು ಸಲಹೆ ಮಾಡಿದೆ.

೮ನೇ ತರಗತಿಯಿಂದ ಕನ್ನಡ ಏಕೈಕ ಪ್ರಥಮ ಭಾಷೆಯಾಗಬೇಕು ಎಂಬ ಪ್ರಮುಖ ಸಲಹೆಯ ಜೊತೆಗೆ ಇಂಗ್ಲಿಷ್, ಹಿಂದಿ, ಸಂಸ್ಕೃತ ಹಾಗೂ ಕನ್ನಡೇತರ ಮಾತೃ ಭಾಷೆಗಳ ಕಲಿಕೆಗೆ ಸಮಂಜಸವಾದ ವ್ಯವಸ್ಥೆಯನ್ನು ಸಮಿತಿ ಸಲಹೆ ಮಾಡಿದೆ.

ಕನ್ನಡೇತರ ಅಲ್ಪಸಂಖ್ಯಾತರ ಮಕ್ಕಳಿಗೆ ಏಕ್‌ದಂ ಹೊರೆಯಾಗದಂತೆ, ಮೂರನೇ ತರಗತಿಯಿಂದ ಕನ್ನಡ ಕಲಿಕೆಯನ್ನು ೧೯೮೧-೮೨ ರಿಂದ ಪ್ರಾರಂಭಿಸಿ ೮೭-೮೮ ರಲ್ಲಿ ೮ನೇ ತರಗತಿ ಮತ್ತು ಮುಂದಕ್ಕೆ ಕನ್ನಡ ೧೫೦ ಅಂಕಗಳ ಪ್ರಥಮ ಭಾಷೆಯಾಗುವಂತೆ ಹಾಗೂ ಅಲ್ಲಿಯವರೆಗೆ ಹಾಲಿ ವ್ಯವಸ್ಥೆ ಮುಂದುವರಿಯುವಂತೆ ಸಲಹೆ ಮಾಡಿದೆ.

ಗೋಕಾಕ್ ವರದಿಯ ಈ ಎಲ್ಲ ಅಂಶಗಳನ್ನು ವಿವರಿಸಿದ ಮಲ್ಲಿಕಾರ್ಜುನ ಭಟ್ಟರು ವರದಿಯ ವಿರುದ್ಧವಾದ ವಾದಗಳನ್ನೆಲ್ಲ ಉತ್ತರಿಸುತ್ತಾ "ಈ ವರದಿಯಿಂದಾಗಿ, ಆಧುನಿಕ ಜ್ಞಾನಕ್ಕೆ ಅತ್ಯಗತ್ಯವಾದ ಇಂಗ್ಲಿಷ್ ಕಲಿಕೆಯನ್ನು ಬಿಡಬೇಕಾಗುತ್ತೆಂಬ ವಾದ ಸರಿಯಲ್ಲ. ಕಲಿಯಲು ಅವಕಾಶವಿದೆ. ಎಲ್ಲವನ್ನೂ ಶಾಲೆಯಲ್ಲೇ ಕಲಿಯುವುದಿಲ್ಲ. ಹೆಚ್ಚಿನ ಕಲಿಕೆ ಸ್ವಂತ ಪರಿಶ್ರಮದಿಂದ ಸಾಧ್ಯ." (ಅ.ಬ. ಪ್ರಕಟಣೆ)

ಮೋಜಿನ ಲೆಕ್ಕ!

೧,೫೦೦ ಕಿಲೋಗ್ರಾಮನ್ನು ೭೫,೦೦೦ ಜನರಿಗೆ ಹಂಚಿದರೆ ಒಬ್ಬರಿಗೆ ಎಷ್ಟು ಬರುತ್ತೆ? ಉತ್ತರ: ೦. ೦೧೮ ಕಿಲೋ. ೫ ಜನರಿಗೆ ಎಷ್ಟು? ಉತ್ತರ: ೯೦ ಗ್ರಾಂ

ಹಾಗಾದರೆ ಕೊಪ್ಪ ತಾಲೂಕಿನ ಪ್ರತಿ ವ್ಯಕ್ತಿಗೆ ಪಾಮ್ ಎಣ್ಣೆ ಈ ತಿಂಗಳ ಕೋಟಾ ೧೮ ಗ್ರಾಂ ಅಥವಾ ೫ ಜನರ ಒಂದು ಕುಟುಂಬಕ್ಕೆ ೯೦ ಗ್ರಾಂ.

ತುಂಬಿಸಿಟ್ಟುಕೊಳ್ಳಿ!

ನಿಧನ

ನ. ರಾ. ಪುರ: ಸುಪ್ರಸಿದ್ಧ ನ್ಯಾಯವಾದಿಗಳು ಹಾಗೂ ಇಲ್ಲಿನ ಪ್ರಪ್ರಥಮ ಪುರಸಭಾಧ್ಯಕ್ಷರೂ ಆಗಿದ್ದ ಪಡ್ . ಸೂರ್ಯನಾರಾಯಣರಾವ್ ಅವರು ಏ. ೨೫ ರಂದು ನಿಧನಹೊಂದಿದರು. ಅವರಿಗೆ ೮೨ ವರ್ಷ ವಯಸ್ಸಾಗಿತ್ತು. ಅವರು ಪತ್ನಿ, ಕೃಷಿಕರಾದ ಪುತ್ರ ಹಾಗೂ ಇತರ ಅಭಿಮಾನಿಗಳನ್ನು ಅಗಲಿ ವ್ಯಕ್ತಪಡಿಸಿದ್ದಾರೆ.

ಗಂಗಮ್ಮನಿಗೆ ಮರಣ, ...

ಚಿಕ್ಕಮಗಳೂರು: ... ದಲಿತರ ಮೇಲಿನ ಹಲ್ಲೆ ಹಾಗೂ ... ಆಲ್ದೂರಿನಲ್ಲಿ ದಲಿತರ ಭೂಮಿಗೆ ... ಗೌಡ ಎಂಬುವರು ... ದಲಿತರ ವಿರುದ್ಧ ... ದನ್ನು ಪ್ರತಿಭಟಿಸಲು ... ಕರ್ನಾಟಕ ದಲಿತ ಸಂಘರ್ಷ ಸಮಿತಿಯ ... ಸಂಚಾಲಕ ಎಂ. ಡಿ. ಗಂಗಯ್ಯನವರನ್ನು ಸರ್ಕಲ್ ಇನ್ಸ್‌ಪೆಕ್ಟರ್ ... ಥಳಿಸಿ, ಠಾಣೆಯಲ್ಲಿ ಕೂಡಿಹಾಕಿದ್ದಾರೆಂದು ವರದಿಯಾಗಿದೆ.

ಯಾರದೋ ಜಮೀನು. ಯಾರೋ ಮಾರಿಕೊಂಡರು!

ಕೊಪ್ಪ: ... ಯೊಂದಿಗೆ ... ಜಮೀನನ್ನು ... ರಿಯವರಿಗೆ 'ಮಾರಿ' ... ಪ್ರಕರಣ ಪತ್ತೆಯಾಗಿದೆ. ... ಬಂದಾಗಲೇ ಮೋಸ ಗೊತ್ತಾಗಿ ಪೋಲೀಸರಿಗೆ ದೂರು ಕೊಡಲಾಗಿ, ಮಾರಿದವರೊಂದಿಗೆ ಇಬ್ಬರೂ ಬಂಧನಕ್ಕೊಳಗಾಗಿ ಈಗ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಕೋಡೂರು ಗ್ರಾಮದ ... ಗೌಡ ... ಗೌಡ ಎಂದು ... ಗಿಯ ಬಿ. ... ದವರು ಅದೇ ಕೋಡೂರು ಗ್ರಾಮದ ... ರ ವಾಸಿ ಕೆ. ಎಸ್. ... ಇವನನೇ ... ದವರು.

ಕೊಪ್ಪ ಪೋಲೀಸರಿಂದ ತನಿಖೆ ಮುಂದುವರಿದಿದೆ.

ಅಮ್ಮಡಿ ಎಸ್ಟೇಟ್ ವಿರುದ್ಧ ರಿಟ್

ಕೊಪ್ಪ: ಇಲ್ಲಿನ ಅಮ್ಮಡಿ ಎಸ್ಟೇಟ್ ವಿರುದ್ಧ ಎ. ಆರ್. ಶ್ರೀನಿವಾಸ ಎಂಬವರು ರಾಜ್ಯದ ಶ್ರೇಷ್ಠ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಅಂಗೀಕೃತವಾಗಿರುವುದಾಗಿ ತಿಳಿದುಬಂದಿದೆ.

ತಮ್ಮ ಜಮೀನಿನ ಪಕ್ಕದಲ್ಲಿ ೫೦೦ ಕ್ಕೂ ಹೆಚ್ಚು ಎಕರೆ ಕಾಡಿನಲ್ಲಿ ಕಾಫಿ ತೋಟ ನಿರ್ಮಿಸಲಾಗಿದೆ. ತಮ್ಮದೂ ಸೇರಿದಂತೆ ಗ್ರಾಮಸ್ಥರ ಖಾಸಗಿ ಜಮೀನುಗಳನ್ನು ಒತ್ತುವರಿ ಮಾಡಲಾಗಿದೆ. ಸಾರ್ವಜನಿಕ ರಸ್ತೆ, ಒಂದು ಗಣಪತಿ ದೇವಸ್ಥಾನ, ದನ ಮೇಯಿಸುವ ಪ್ರದೇಶ ಎಲ್ಲ ಸೇರಿಸಿ ಬೇಲಿ ಹಾಕಲಾಗಿದೆ. ಒಟ್ಟು ೭ ಹಳ್ಳಿಗಳ ಜನರಿಗೆ ತೊಂದರೆಯಾಗಿದೆ—ಎಂದು ಅರ್ಜಿದಾರರು ದೂರಿದ್ದಾರೆ.

ಅಮೂಲ್ಯವಾದ ಕಾಡನ್ನು ಅನಧಿಕೃತವಾಗಿ ಕಡಿಯಲಾಗುತ್ತಿದೆ. ಕಾಡಿನ ನಾಶವನ್ನು, ಭೂಮಿ ಅತಿಕ್ರಮಣ-ಅಕ್ರಮ ಸಾಗುವಳಿಗಳನ್ನು ತಡೆಯುವುದು ಅಧಿಕಾರಿಗಳ ಕರ್ತವ್ಯವಾದರೂ ಎಸ್ಟೇಟಿನವರಿಗೆ ಸರ್ಕಾರದ ಉನ್ನತ ಸ್ಥಾನಗಳಲ್ಲಿರುವವರ ಕುಮ್ಮಕ್ಕು ಇರುವುದರಿಂದ ಅಧಿಕಾರಿಗಳು ಏನೂ ಮಾಡದೆ ಕರ್ತವ್ಯಚ್ಯುತರಾಗಿದ್ದಾರೆ ಎಂದೂ ದೂರಿರುವ ಅರ್ಜಿದಾರರು, ... ಪ್ರಕರಣವನ್ನು ... ನ್ಯಾಯಾಲಯಕ್ಕೆ ... ನಾರಿಗೆ ಕೇಳಿಕೊಂಡಿದ್ದಾರೆ.

ಸರ್ವೆ ನಂ ... ಎಂಬ ... ಬಗ್ಗೆ ... ಮಾಡಿ ... ಒತ್ತುವರಿಗೆ ... ಎಂದು ... ಪ್ರಶ್ನಿಸಿದ್ದಾರೆ.

... ಕೊಪ್ಪ, ... ತಹಸೀಲ್ದಾರ್ ... ಹಾಗೂ ... ನ್ಯಾಯಾಲಯ ... ಕೈದು ಕೇಳಿದೆ.

ಮಿತ್ರ ಕಲಾ ಮಂಡಳಿ, ಕೊಪ್ಪ

ಇವರು ಅರ್ಪಿಸುವ ಪ್ರಯೋಗಾತ್ಮಕ ನಾಟಕ

ಭತ್ತದ ಕಾಳುಗಳು

ನಿರ್ದೇಶನ: **ಸುರೇಂದ್ರ ನಾಯಕ್**, ಕೊಪ್ಪ.

ಸಂಗೀತ: **ಸಂಗೀತ್ ಮೆಲೋಡೀಸ್**, ಕೊಪ್ಪ.

ಡಿಸ್ಕೋಲೈಟ್: **ಶಕ್ತಿ ಎಲೆಕ್ಟ್ರಿಕಲ್ಸ್**, ಸಾಸ್ವಾನ.

ಕರಾಟೆ: **ಗೋವರ್ಧನ್**, ಬೆಂಗಳೂರು.

ದಿನಾಂಕ **6-5-82** ಗುರುವಾರ ಮತ್ತು **7-5-82** ಶುಕ್ರವಾರ ರಾತ್ರಿ **9-30**ಕ್ಕೆ

ಸ್ಥಳ: **ಪುರಭವನ**, ಕೊಪ್ಪ. ಟಿಕೇಟು ದರ: **ರೂ. 10** ಮತ್ತು **5.**

ಮಲೆನಾಡಿಗೆ ವರದಾನವಾಗಬಲ್ಲ—

ರೇಷ್ಮೆ: ಹುಂಬತನ ಸಹಿಸದ, ಲಾಭ ತರುವ ಬೆಳೆ

ಮನೆಯಲ್ಲಿ ತೋಟ, ಗದ್ದೆ ಇರುತ್ತದೆ. ಎಷ್ಟು ಜನ ಎಷ್ಟು ಹೊತ್ತು ಕೆಲಸ ಮಾಡಿದರೂ ಮುಗಿಯದಷ್ಟು ಕೆಲಸ ಇರುತ್ತದೆ. ವರ್ಷ ವರ್ಷವೂ ದುಬಾರಿಯಾಗುತ್ತಿರುವ ಸಂಸಾರದ ಎಲ್ಲ ಖರ್ಚಿನ ಜೊತೆಗೆ ಮದುವೆ–ಮುಂಜಿ ಮುಂತಾದ ಸಾಲಗಳೂ ಸೇರಿ ಸಂಸಾರ ತತ್ತರಿಸುತ್ತಿರುತ್ತದೆ. ಅದರೂ ಮನೆಯ ಹೆಂಗಸರು ತೋಟಗದ್ದೆಗಳಲ್ಲಿ ಕೆಲಸ ಮಾಡಬಾರದು. ಒಬ್ಬರಿಗೆ ಅಥವಾ ದೊಡ್ಡ ಸಂಸಾರವಾದರೆ ಇಬ್ಬರಿಗೆ ಮನೆಯೊಳಗಿನ ಕೆಲಸ ಸರಿಯಾಗುತ್ತದೆ. ಅದಕ್ಕಿಂತ ಹೆಚ್ಚು ಜನ ಇದ್ದರೂ ಅಷ್ಟೇ ಕೆಲಸವನ್ನೇ ಹಂಚಿಕೊಂಡು ಮಾಡುತ್ತಾರೆ. ಇದು ಎಷ್ಟೋ 'ಸ್ಥಿತಿ'ವಂತರ ಮನೆಗಳಲ್ಲಿನ 'ನಿರುದ್ಯೋಗ ಪರಿಸ್ಥಿತಿ'. ಶ್ರೀಮಂತರ ಮನೆಗಳಲ್ಲಂತೂ ಸಾಮಾನ್ಯವಾಗಿ ಯಾವಾಗಲೂ ನಿರುದ್ಯೋಗವೇ.

ಇನ್ನೊಂದು ರೀತಿ. ಜಮೀನು ಕಡಿಮೆ ಇರುತ್ತದೆ. ಬೆಳೆದ ಬೆಳೆ ಆರೆಂಟು ತಿಂಗಳಿಗೆ ಮಾತ್ರ ಸಾಕು. ಆದರೂ— ತಮ್ಮ ಸ್ವಂತಕ್ಕಾಗಿ ಸ್ವಂತ ಜಮೀನಿನಲ್ಲಿ ದುಡಿಯುವುದಕ್ಕೇ ನಿರುತ್ಸಾಹ ಹುಟ್ಟಿಸುವ ಇಂದಿನ ಪರಿಸ್ಥಿತಿಯಲ್ಲಿ ಬೇರೆಯವರಿಗಾಗಿ ದುಡಿಯಲು ಮನಸ್ಸು ಬಾರದೆಯೋ, ಅಥವಾ ಆಸ್ತಿವಂತರನ್ನು ಅನುಕರಿಸುವ ವಿನಾಶಕಾರಿ ಗೀಳಿನಿಂದಾಗಿಯೋ ಅಂತೂ ಅರೆಹೊಟ್ಟೆ ಉಂಡು ನಿರುದ್ಯೋಗ ಅನುಭವಿಸುತ್ತಾರೆ.

ಈ ಎರಡೂ ರೀತಿಯ ನಿರುದ್ಯೋಗಿ ಕುಟುಂಬಗಳಿಗೆ ಕಷ್ಟಪಟ್ಟಾದರೂ ಸ್ವತಂತ್ರವಾಗಿರಬೇಕೆಂಬ ಮನಸ್ಸಿದ್ದರೆ ಲಾಭದಾಯಕವಾಗಬಲ್ಲ ಒಂದು ಬೆಳೆ ರೇಷ್ಮೆ.

ರೇಷ್ಮೆ ಬೆಳೆ

ರೇಷ್ಮೆಹುಳ ಹಿಪ್ಪು ನೇರಳೆ(ಅಂಬಾರ್ಲಿ) ಸೊಪ್ಪು ತಿಂದು ಬೆಳೆಯುವ ಒಂದು ಕೀಟ. ಮೊಟ್ಟೆಯಿಂದ ಬಂದ ಮರಿ ಪೂರ್ತಿ ಬೆಳೆದು ("ಹಣ್ಣಿಗೆ ಬರುವುದು") ಗೂಡು ಕಟ್ಟಲು ೨೫ ರಿಂದ ೨೮ ದಿನ ಬೇಕು. ಆ ಅವಧಿಯಲ್ಲಿ ಅದು ನಾಲ್ಕು ಸಲ ಪೊರೆ ಕಳಚುತ್ತದೆ. ("ಜ್ವರಕ್ಕೆ ಕೂರುವುದು") ಗೂಡು ಕಟ್ಟಿದ ಮೇಲೆ ೧೦ ದಿನಕ್ಕೆ ಗೂಡು ಹರಿದು ಚಿಟ್ಟೆಯಾಗಿ ಹೊರಗೆ ಬರುತ್ತದೆ. ಆದ್ದರಿಂದ ಗೂಡು ಕಟ್ಟಿ ೩-೪ ದಿನದೊಳಗೆ ಅದನ್ನು ವಿಲೇವಾರಿ ಮಾಡಬೇಕು.

ಅಂಬಾರ್ಲಿ ಸೊಪ್ಪು ಬೆಳೆಯುವಲ್ಲಿಂದ ಹಿಡಿದು ಹೀಗೆ ಗೂಡು ಸಂಗ್ರಹಿಸುವವರೆಗಿನ ಕಾಯಕವೇ ರೇಷ್ಮೆ ಕೃಷಿ.

ನಮ್ಮ ಈ ಭಾಗದ ಹವೆ ರೇಷ್ಮೆ ಬೆಳೆಗೆ (ರೇಷ್ಮೆ ಹುಳು ಸಾಕುವುದಕ್ಕೆ) ಬಹಳ ಅನುಕೂಲಕರವಾಗಿದೆ ಎಂದು ಕಂಡುಬಂದಿದೆ. ಮಳೆಗಾಲದ ೩ ತಿಂಗಳು ಬಿಟ್ಟರೆ, ವರ್ಷವಿಡೀ ಒಂದಾದ ಮೇಲೊಂದು ಬೆಳೆ ತೆಗೆಯಬಹುದು.

ಬೆಳೆಗೆ ಸೌಲಭ್ಯಗಳು

ರೇಷ್ಮೆ ಬೆಳೆಗಾಗಿ ಸರ್ಕಾರ ಹಲವಾರು ರೀತಿಯಲ್ಲಿ ಸಾಲ-ಸೌಲಭ್ಯಗಳನ್ನು ಒದಗಿಸುತ್ತಿದೆ. ಪಶ್ಚಿಮ ಘಟ್ಟಗಳ ಯೋಜನೆಯಡಿ ಇದಕ್ಕೆ ಹಣಕಾಸು ಒದಗಿಸಲಾಗುತ್ತಿದೆ. ಶೃಂಗೇರಿ, ಕೊಪ್ಪ, ನ. ರಾ. ಪುರ, ತೀರ್ಥಹಳ್ಳಿ, ಮುಂತಾದ ಕೇಂದ್ರಗಳಲ್ಲಿ ರೇಷ್ಮೆ ಇಲಾಖೆಯ ಕಚೇರಿಗಳಿದ್ದು, ಅಲ್ಲಿನ ಸಿಬ್ಬಂದಿ ಬೆಳೆಗಾರರಿಗೆ ಸತತವಾಗಿ ಮಾರ್ಗದರ್ಶನ ಮಾಡುವರಲ್ಲದೆ, ಮರಿಗಳನ್ನು ಮೊದಲ ೨ ಜ್ವರದವರೆಗೆ (ಸುಮಾರು ೧೦ ದಿನ) ಸಾಕಿಕೊಡುವರು. ಅದಕ್ಕಾಗುವ ಸೊಪ್ಪನ್ನು ಬೆಳೆಗಾರರು ಒದಗಿಸಬೇಕು. ಉಪ್ಪನೇರಳೆ ಕಡ್ಡಿಗಳನ್ನು ಇಲಾಖೆಯ ಖರ್ಚಿನಲ್ಲಿ ಸಾಗಿಸಿ ಕೊಡಲಾಗುತ್ತದೆ.

ಹರಿಜನ–ಗಿರಿಜನರಿಗೆ, ಸಣ್ಣ-ಅತಿಸಣ್ಣ ರೈತರಿಗೆ ಉಚಿತ ಸಲಕರಣೆಗಳು, ಸಹಾಯಧನ ದೊರೆಯುತ್ತವೆ.

ಪ್ರಯೋಜನಗಳು

ರೇಷ್ಮೆ ಬೆಳೆಗೆ ವಿಶ್ವವ್ಯಾಪಿ ಬೇಡಿಕೆಯಿದೆ. ವಿಶ್ವಬ್ಯಾಂಕ್ ರಾಜ್ಯದ ರೇಷ್ಮೆ ಯೋಜನೆಗೆ ಸಾಲ ನೀಡುತ್ತಿದೆ. ಹೀಗಾಗಿ ರೇಷ್ಮೆ ನಂಬಿಕೆಗೆ ಅರ್ಹವಾದ, ಬೆಳೆದವರಿಗೆ ಮೋಸವಿಲ್ಲದಂತೆ ಲಾಭ ತರುವ ಒಂದು ಬೆಳೆಯಾಗಿದೆ.

ಮನೆಯವರೇ ಹೆಚ್ಚಿನ ಕೆಲಸ ಮಾಡುವುದರಿಂದ ಹಣಕಾಸು ಹೂಡಿಕೆ ಅತಿಕಮ್ಮಿ. ಆದ್ದರಿಂದ ಒಂದು ಬೆಳೆ ಸೋತರೂ ನಷ್ಟ ಕಡಿಮೆ. ಅಲ್ಲದೆ ಬೆಳೆಗೆ ವಿಮೆ ಸೌಲಭ್ಯವಿದೆ. ಆದ ನಷ್ಟದ ದೊಡ್ಡ ಪಾಲು ಹಿಂದೆ ಬರುತ್ತದೆ.

ಬೆಳೆ ಇಟ್ಟು, ಕರಾರುವಾಕ್ಕಾಗಿ ೨೫ ರಿಂದ ೨೮ ದಿನಗಳಲ್ಲಿ 'ಬೆಳೆ' ಬರುವುದರಿಂದ, ಇತರ ಕೆಲಸಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಸುಲಭ. ಅನಿವಾರ್ಯದ ಕೆಲಸಗಳಿದ್ದರೆ, ಸೊಪ್ಪು ಕೊರತೆಯಾಗುವ ನಿರೀಕ್ಷೆಯಿದ್ದರೆ, ಅಥವಾ ಮಳೆ ಬರುವ ನಿರೀಕ್ಷೆ ಇದ್ದರೆ-ಒಂದು ಬೆಳೆಯನ್ನು ಸ್ವಲ್ಪ ಮುಂದೆ ಹಾಕಿಕೊಳ್ಳಬಹುದು. ಕೆಲಸ ಮಾಡಲು ಸಾಕಷ್ಟು ಜನರಿದ್ದು ಸೊಪ್ಪು ಇದ್ದರೆ ತಿಂಗಳಿಗೊಂದು ಬೆಳೆಗೆ ಬದಲು ೧೫ ದಿನಕ್ಕೊಂದು ಬೆಳೆ ತೆಗೆಯಬಹುದು.

ಸಾಗಾಣಿಕೆ

ರಾಜ್ಯದಲ್ಲಿ ರೇಷ್ಮೆಯ ಪ್ರಮುಖ ವ್ಯಾಪಾರ ಕೇಂದ್ರ ಬೆಂಗಳೂರು ಜಿಲ್ಲೆಯ ರಾಮನಗರ. ಚಿಕ್ಕಮಗಳೂರಿಂದ ಬೆಂಗಳೂರಿಗೆ ಹೋಗುವ ಒಂದು ಬಸ್ಸು ನೇರ ರಾಮನಗರದವರೆಗೂ ಹೋಗುತ್ತದೆ. ಬೆಳೆಗಾರರು ಹೆಚ್ಚಾದಂತೆ ಶೃಂಗೇರಿ, ನ. ರಾ. ಪುರ, ತೀರ್ಥಹಳ್ಳಿ ಮುಂತಾದ ಕಡೆಗಳಿಂದ ಬೆಂಗಳೂರಿಗೆ ಹೋಗುವ ಬಸ್ಸುಗಳೂ ರಾಮನಗರಕ್ಕೆ ಹೋಗುವಂತೆ ವ್ಯವಸ್ಥೆ ಮಾಡಿಸಿಕೊಳ್ಳುವುದು ಕಷ್ಟದ ಕೆಲಸವೇನಲ್ಲ-

(೪ನೇ ಪುಟಕ್ಕೆ)

ಸಗೋತ್ರ ವಿವಾಹ: ಪ್ರತಿಕ್ರಿಯೆಗಳು

ಮಠಾಧೀಶರಿಂದ ಹಾಗು ತಂದೆತಾಯಿಗಳಿಂದ ತಿದ್ದಲು ಸಾಧ್ಯವೆ?

'ದೀಪವಟಿಗೆ' ಸಂಪಾದಕರಿಗೆ

ಮಾನ್ಯರೇ,

ತಮ್ಮ ದಿನಾಂಕ ೧೮-೪-೮೨ ರ ಪತ್ರಿಕೆಯಲ್ಲಿ "ಸಗೋತ್ರ ವಿವಾಹ ಪಾಪವೇ? " ಎಂಬ ಶಿರೋನಾಮೆಯಡಿ ಹರಿಹರಪುರ ಸ್ವಾಮಿಗಳಿಗೊಂದು ಬಹಿರಂಗ ಪತ್ರ ಎಂಬುದನ್ನು ಪ್ರಕಟಗೊಳಿಸಿರುವುದು ಸರಿಯಷ್ಟೆ. ಆ ಬಗ್ಗೆ ನನ್ನ ಕೆಲ ಅನಿಸಿಕೆಗಳನ್ನು ಈ ಮೂಲಕ ಸಾರ್ವಜನಿಕರ ಮುಂದಿಡಲು ಅಪೇಕ್ಷಿಸುತ್ತೇನೆ.

ಈಗಿನ ಕಾಲದಲ್ಲಿ ಧರ್ಮದಿಂದ-ಧರ್ಮಕ್ಕೆ, ಒಂದು ಜಾತಿಯಿಂದ ಮತ್ತೊಂದು ಜಾತಿಯೊಂದಿಗೆ ವಿವಾಹ ಸಂಬಂಧಗಳು ಹೆಣ್ಣು ಮತ್ತು ಗಂಡುಗಳ ಪ್ರೀತಿಯ ಸಲಿಗೆಯಿಂದ ಯಾವ ಜಾತಕ, ಗೋತ್ರ ಮತ ಭೇದಗಳು ಇಲ್ಲದೇ ವಿವಾಹಗಳು ಸರಳ ರೀತಿಯಲ್ಲಿ ನಡೆಯುತ್ತಿರುವುದು ಪತ್ರಿಕೆಗಳಲ್ಲಿ ಸುದ್ದಿಗಳನ್ನು ಓದುತ್ತಾ ಬಂದಿರುತ್ತೇವೆ. ತಾವು ಸಹಾ ಆ ವಿಷಯಗಳನ್ನು ಓದಿರುತ್ತೀರಿ ಎಂದು ಭಾವಿಸಿರುತ್ತೇನೆ.

ಇಂತಹ ಸನ್ನಿವೇಶದಲ್ಲಿ ತಾವು ತಮ್ಮ ಪತ್ರಿಕೆಯಲ್ಲಿ ದುರುದ್ದೇಶಪೂರ್ವಕವಾಗಿ ಸ್ವಾಮೀಜಿ ಒಬ್ಬರನ್ನು ರಾಜಕೀಯಕ್ಕೆ ಎಳೆಯುವ ರೀತಿಯಲ್ಲಿ ಅವರ ಅಭಿಪ್ರಾಯ ಕೇಳಿರುವುದು ವಿವೇಚನರಹಿತವಾದ ಸಂಗತಿಯಾಗಿದೆ.

ಕಾರಣ ಎಲ್ಲಿಯೋ ಒಬ್ಬರು, ಇಬ್ಬರು ಸಂಪ್ರದಾಯಕ್ಕೆ ಬದ್ಧರಾಗಿದ್ದರೆ, ಎಲ್ಲರೂ ಸಂಪ್ರದಾಯಕ್ಕೆ ಬದ್ಧರಾಗಿರುವುದಿಲ್ಲ. ಅದೂ ಅಲ್ಲದೇ ಸಂಪ್ರದಾಯಕ್ಕೆ ಬದ್ಧರಾಗಿ ನಡೆಯಬೇಕು ಎಂದು ಎಲ್ಲಿಯೂ ಮಠಾಧಿಪತಿಗಳು ಯಾರಿಗೂ ಕರೆ ಕೊಟ್ಟಿರುವುದು ನನಗೆ ತಿಳಿದ ಮಟ್ಟಿಗೆ ಕಂಡಿಲ್ಲ. ಹಾಗೆ ಒಂದು ಸಮಯ ಒಂದು ಮಠಾಧೀಶರು ಒಂದು ವ್ಯಕ್ತಿಗೆ ನೀನು ಗೋತ್ರ ನೋಡು, ಜಾತಿ ವಿಚಾರಿಸು, ಅವಳ ಶೀಲ ವಿಚಾರಿಸು, ಇತ್ಯಾದಿಯಾಗಿ ಎಲ್ಲಿಯೂ ಅವರು ತಿಳಿಸಿರುವುದಿಲ್ಲ.

ಆ ರೀತಿ ಪ್ರತಿ ಮಠಾಧೀಶರುಗಳು ಹೇಳಿಕೆ ಕೊಡುತ್ತಾ ಹೋದಲ್ಲಿ ಅದರ ಬೆಲೆ ಎಷ್ಟು ಆಗಬಹುದು? . ಅದೂ ಅಲ್ಲದೆ ಆ ರೀತಿ ಬೋಧನೆ ಮಾಡುತ್ತಾ ಬಂದರೆ ಅವರ ಮಾತಿಗೆ ಬೆಲೆ ಕೊಡುವ ಜನ ಈ ಕಾಲದಲ್ಲಿ ಎಷ್ಟು ಮಂದಿ ಇದ್ದಾರೆ? ಈಗಿನ ಕಾಲದಲ್ಲಿ ಹೆತ್ತ ತಂದೆ ತಾಯಿಗಳಿಗೆ ತಮ್ಮ ಮಕ್ಕಳನ್ನು ತಿದ್ದಲಿಕ್ಕೆ ಆಗದೆ ಇರುವಾಗ ಮಠಾಧಿಪತಿಗಳಿಂದ ತಿದ್ದಲು ಸಾಧ್ಯವೆ? .

ನಮ್ಮ ಸಮಾಜವನ್ನು ತಿದ್ದಿಕೊಳ್ಳುವುದು ಆಯಾ ಜನಗಳಿಗೆ ಸಂಬಂಧ ಪಟ್ಟದ್ದೇ ಹೊರತು ಈಗಿನ ಕಾಲದಲ್ಲಿ ಮಠಾಧಿಪತಿಗಳಿಗೆ ಸಂಬಂಧಪಟ್ಟದ್ದಲ್ಲ. ಅದೂ ಅಲ್ಲದೆ ನಮ್ಮ ಜನಗಳಿಗೆ ಗೊತ್ತಿರುವಂತೆ 'ಗಾಳಿ ಬಂದಂತೆ ತೂರಿಕೊ' ಎಂಬ ನಾಡು ನುಡಿಯಂತೆ ನನಗೆ ಹೇಗೆ ಅನುಕೂಲವೋ ಹಾಗೆ ನಡೆದುಕೊಳ್ಳುವುದು ಸೂಕ್ತವೇ ಹೊರತು ಯಾವ ಮಠಾಧಿಪತಿಗಳೂ ಯಾರನ್ನೂ ಈಗಿನ ಕಾಲದಲ್ಲಿ ತಿದ್ದುವುದಕ್ಕೆ ಆಗುವುದಿಲ್ಲ; ಅಲ್ಲದೆ ಬೋಧನೆ ಮಾಡುವುದಕ್ಕೆ ಸಹಾ ಆಗುವುದಿಲ್ಲವೆಂಬುದನ್ನು ತಾವು ಮನಗಾಣಬೇಕಾಗಿದೆ. ಇಂತಹ ಸನ್ನಿವೇಶದಲ್ಲಿ ಯಾವ ಮಠಾಧೀಶರನ್ನು ವಿವಾದಾಸ್ಪದ ಹೇಳಿಕೆಗಳಿಗೆ ಆವಕಾಶ ಮಾಡಿಕೊಡಬಾರದಾಗಿ ವಿನಂತಿ.

—ಕೆ. ಎಂ. ಕೆ. ಮೂರ್ತಿ
ಚಿಕ್ಕಮಗಳೂರು.

ಸಗೋತ್ರ ವಿವಾಹ: ಇದ್ಯಾವ ಮಹಾ ವಿಷಯ ...?

ಮಾನ್ಯರೆ,

ಸಗೋತ್ರ ವಿವಾಹ ಕುರಿತ ನಿಮ್ಮ ಪತ್ರಿಕೆಯಲ್ಲಿನ ಬಹಿರಂಗ ಪತ್ರ ಓದಿದ ಇಬ್ಬರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಒಬ್ಬರು ಗೆಳೆಯರು ಹೇಳಿದ್ದು-"ಇದ್ಯಾವ ಮಹಾ ವಿಷಯ ಅಂತ? ಅಕ್ಕಂದಿರ ಮಕ್ಕಳನ್ನು (ಸೋದರಿಕೆ ಸಂಬಂಧ) ಮದುವೆಯಾಗುತ್ತಾರೆ. ಸಗೋತ್ರ ವಿವಾಹ ಅದರಷ್ಟು ಬೇರೆ ಕೆಟ್ಟದಲ್ಲ."

ಇನ್ನೊಬ್ಬರು ಮುಖಂಡರು ಹೇಳಿದರು –"ಇದಕ್ಕೆಲ್ಲ ಸ್ವಾಮಿಗಳಿಗೆ ಯಾಕೆ ಬಹಿರಂಗ ಪತ್ರ ಬರೆಯಬೇಕಿತ್ತು? ಅವರವರಿಗೆ ಯಾವುದು ಸರಿಯೋ ಅದನ್ನು ಎಲ್ಲರೂ ಮಾಡ್ತಾರೆ. ಅಲ್ಲ, ಈ ಮಠಾಧಿಪತಿಗಳೂ ಅಷ್ಟೇ ಅನ್ನಿ-ಒಂದೊಂದು ಕಡೆ ಒಂದೊಂದು ಥರ ಹೇಳಿಕೆ ಕೊಡ್ತಾರೆ. ..."

ಕೊಪ್ಪ. –'ನಾರದ'

ಓದುಗರಲ್ಲಿ—

ಇನ್ನಷ್ಟು ಅಭಿಪ್ರಾಯಗಳು ಬರಲಿ, ವಿಚಾರ ವಿಮರ್ಶೆ ನಡೆಯಲಿ ಎಂದು ನಮ್ಮ ಆಶೆ. ಈ ಸಮಸ್ಯೆ ಬಗ್ಗೆ ನಿಮಗೂ ಏನಾದರೂ ಅನ್ನಿಸುತ್ತಿರಬಹುದಲ್ಲವೆ? –ಸಂ.

ಓದುಗರ ಪತ್ರಗಳು

ಸ್ಟೈಪೆಂಡಿಯರಿಗಳ ಖಾಯಂ: ನಾಟಕವೆ?

ಕರ್ನಾಟಕ ರಾಜ್ಯ ಸ್ಟೈಪೆಂಡರಿ ಸಂಘ, ಬೆಂಗಳೂರು – ಇವರಿಗೆ ಬರೆದುಕೊಂಡ ಮನವಿ —

ನಾಲ್ಕು ವರ್ಷಗಳಿಂದ ಹಂಗಾಮಿ ನೌಕರರಾಗಿ ಸ್ಟೈಪೆಂಡಿಯರಿ ಪದವೀಧರರು ದುಡಿಯುತ್ತಿದ್ದು, ಆಶ್ವಾಸನೆ ಯುಗದಲ್ಲಿ ಮುಳುಗಿರುವ ನಾವು ಜೀವನದಲ್ಲಿ ಖಾಯಂ ಉದ್ಯೋಗಿಗಳಾಗುವುದು ಸಾಧ್ಯವೇ ಅಥವ ಕನಸಿನ ಗಂಟೆ? ನಾವು ೧೪ ಸಾವಿರ ಸ್ಟೈಪೆಂಡಿಯರಿ ಪದವೀಧರರಿದ್ದು ಇವರಲ್ಲಿ ೧೦ ಸಾವಿರ ಜನರು ವೈವಾಹಿಕ ಜೀವನದಲ್ಲಿ ಮುಳುಗಿದ್ದು, ಸರ್ಕಾರ ಕೊಡುತ್ತಿರುವ ಕೇವಲ ಇನ್ನೂರು ರೂ. ವಿತನೇತನದಿಂದ ಜೀವನ ಮಾಡಲು ಸಾಧ್ಯವೇ ? ಇವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಯೋಮಿತಿ ಮೀರಿದವರಿದ್ದು ಅವರು ಯಾವ ಇಲಾಖಾ ಪರೀಕ್ಷೆಗೂ ಹಾಜರಾಗಲು ಸಾಧ್ಯವಿಲ್ಲದಿರುವಾಗ ನಮ್ಮನ್ನು ಖಾಯಂ ಮಾಡಲು ರಚಿಸಿರುವ ಉಪಸಮಿತಿ ವರದಿಯು ಸರ್ಕಾರದ ಗಮನಕ್ಕೆ ಹೋಗದೆಯೇ ಅಥವಾ ನಾಟಕವೇ ಎಂದು ಚಾತಕ ಪಕ್ಷಿಯಂತೆ ಕಾಯುತ್ತಿದ್ದೇವೆ, ನೊಂದ ಸ್ಟೈಪೆಂಡಿಯರಿ ಪದವೀಧರರು.

—ವೈ. ಜಿ. ರವಿಶಂಕರ್,
ಸ್ಟೈಪೆಂಡಿಯರಿ ಅಧ್ಯಕ್ಷ,
ಶ್ರೀಂಗೇರಿ ತಾಲ್ಲೂಕ್.

'ಕಗ್ಗತ್ತಲು: ದೀಪ ಹಾಕಿಸಿ'

ಕೊಪ್ಪ ಕೆಳಗಿನ ಪೇಟೆಯ ಟೋಲ್ ಗೇಟ್‌ನಿಂದ ಮುಂದೆ ಕೊಪ್ಪ ಎಸ್ಟೇಟ್ ಕಡೆ ಹೋಗುವ (ತರೀಕೆರೆ-ಮಂಗಳೂರು) ರಸ್ತೆಯು ಕೊಪ್ಪ ಗ್ರಾಮ ಪಂಚಾಯ್ತಿಯ ವ್ಯಾಪ್ತಿಗೆ ಬರುವುದಾಗುತ್ತಿದೆ. ಟೋಲ್ ಗೇಟ್‌ನಿಂದ ಮುಂದೆ ಶಿವಮೊಗ್ಗ ರಸ್ತೆಗೆ ಸೇರುವಲ್ಲಿಯವರೆಗಿನ ವ್ಯಾಪ್ತಿಯಲ್ಲಿ ಹೆಚ್ಚಾಗಿ ಕೃಷಿ ಕಾರ್ಮಿಕರೇ ವಾಸವಾಗಿದ್ದಾರೆ.

ಸಾಮಾನ್ಯವಾಗಿ ಇಲ್ಲಿ ವಾಸಿಸುವ ಜನರ ಪೈಕಿ ಬಹುತೇಕ ಮಂದಿ ಹಗಲಿನಲ್ಲಿ ತಮ್ಮ ಜೀವನೋಪಾಯದ ಕೆಲಸಗಳಿಗೆ ಹೋಗಿದ್ದು ಸಂಜೆಯ ಹೊತ್ತಿನಲ್ಲಿ ಮನೆಗೆ ಬಂದು ನಂತರ ಕೊಪ್ಪ ಪೇಟೆಗೆ ದಿನನಿತ್ಯದ ಗೃಹಬಳಕೆ ಸಾಮಾನುಗಳನ್ನು ಕೊಳ್ಳಲು ಬರುವುದು ಸಾಮಾನ್ಯ ಸಂಗತಿಯಾಗಿದೆ.

ಈ ರೀತಿ ಸಂಜೆ ೬ ಗಂಟೆಯಿಂದ ಅರ್ಧ ರಾತ್ರಿಯವರೆಗೂ ಬಹಳ ಮಂದಿ ತಿರುಗುವ ಈ ಗ್ರಾಮ ಪಂಚಾಯ್ತಿ ರಸ್ತೆಯಲ್ಲಿ ಒಂದು ದಾರಿದೀಪವಿಲ್ಲದೇ ತುಂಬಾ ತೊಂದರೆಯಾಗಿದೆ. ಕತ್ತಲಲ್ಲಿ ಆ ರಸ್ತೆಯಲ್ಲಿ ಓಡಾಡುವಾಗ ಎದುರಿಗೆ ಬರುವ ಯಾರೊಬ್ಬರೂ ಕಾಣುವುದೇ ಇಲ್ಲ. ದನಕರುಗಳು, ನಾಯಿಗಳು ಅಡ್ಡ ಬಂದರೂ ಕಾಣದಷ್ಟು ಕತ್ತಲಾಗಿರುವ ಈ ರಸ್ತೆಯಲ್ಲಿ, ಈ ವರೆಗೂ ಈ ಬದಿಯಿಂದ ಚುನಾಯಿತರಾದ ಯಾವ ಪಂಚಾಯ್ತಿ ಸದಸ್ಯರೂ ಕತ್ತಲಾದ ಮೇಲೆ ಈ ರಸ್ತೆಯಲ್ಲಿ ಓಡಾಡಿರಲಿಕ್ಕಿಲ್ಲ. ಹಾಗೇನಾದರೂ ಓಡಾಡಿದ್ದಿದ್ರೆ ಈ ವೇಳೆಗಾಗಲೇ ಆ ರಸ್ತೆಯಲ್ಲಿ ಒಂದೆರಡಾದರೂ ದಾರಿದೀಪ ಇರುತ್ತಿದ್ದವು. ಇನ್ನು ಮೇಲಾದರೂ ಈ ರಸ್ತೆಗೆ ಒಂದೆರಡಾದರೂ ದಾರಿದೀಪ ಹಾಕಿಸಲಿ ಎಂದು ಈ ಪ್ರದೇಶದಲ್ಲಿ ವಾಸಿಸುವ ಹಲವಾರು ಜನತೆಯ ಅಭಿಲಾಷೆ

–ಇದೇ ರಸ್ತೆಯಲ್ಲಿ ಹೆಚ್ಚಾಗಿ ತಿರುಗಾಡುವ
ಅಲೆಮಾರಿ.

ವಿದ್ಯುದ್ದೀಪದ ಸೌಕರ್ಯವಿಲ್ಲ

ಶ್ರಿಂಗೇರಿ ತಾ॥ ಕೆಳಕೊಪ್ಪ ಗ್ರಾಮವು ಪ್ರದೇಶ ಮುಂದುವರೆದು ಬಹಳ ದಿನವಾದರೂ ಅಂತಹ ದೊಡ್ಡ ಗ್ರಾಮಕ್ಕೆ ದೀಪದ ಸೌಕರ್ಯವಿಲ್ಲದೇ ಇರುವುದು ಸಂಬಂಧಪಟ್ಟ ಮಂತ್ರಿ, ಅಧಿಕಾರಿಗಳು ನಾಚಿಕೆ ಪಡಬೇಕಾದ ವಿಷಯವಾಗಿದೆ. ಮತ್ತು ಇದರಿಂದ ಗ್ರಾಮದ ಜನತೆ ತುಂಬಾ ಕಷ್ಟಪಡುತ್ತಿದ್ದಾರೆ. ಇದನ್ನು ತಿಳಿದು ಸಂಬಂಧಪಟ್ಟ ಅಧಿಕಾರಿಗಳು ಇದಕ್ಕಾಗಿ ಸೂಕ್ತ ಕ್ರಮ ಕೈಗೊಳ್ಳಬೇಂದು ಪ್ರಾರ್ಥನೆ.

ಶ್ರಿಂಗೇರಿ. **ಪುಂಡರೀಕ ?. ಎಂ.**

ಮೋರಿಯ ಸ್ವಚ್ಛತೆ ಮಂತ್ರಿಯ ಕೆಲಸವಲ್ಲ

ದಿನಾಂಕ ೧೫-೪-೮೧ರ 'ದೀವಟಿಗೆ'ಯ ಓದುಗರ ವಿಭಾಗಕ್ಕೆ ಕೊಟ್ಟಿರುವ "ಮೂಗು ಕಟ್ಟಿಡಲು ಬರುವಂತಿದ್ದರೆ" ಎಂಬ ವಿಚಾರ ಓದಿ 'ಅಳುವುದೋ ನಗುವುದೊ ನೀವೇ ಹೇಳಿ' ಎಂಬಂತಾಯಿತು. ಕೊಳಚೆ ವಾಸನೆ ಕೊಪ್ಪದಲ್ಲಲ್ಲ, ಇಡೀ ಭಾರತದಲ್ಲೇ ಕೊಳಚೆ ಇದ್ದೇ ಇದೆ. ಅದ ಮಾತ್ರಕ್ಕೆ ಸಚಿವರು ಏನೂ ಮಾಡಿಸಲು ಸಾಧ್ಯವಿಲ್ಲ. ಅಂತಹದೇನಾದರೂ ಇದ್ದರೆ ಸಂಬಂಧಪಟ್ಟ ಪಂಚಾಯಿತಿ ಅಥವಾ ಪುರಸಭೆಗೆ ಅರ್ಜಿ ಕೊಟ್ಟು ಅದನ್ನು ತೆಗೆಸುವ ಪ್ರಯತ್ನ ಮಾಡಬೇಕು. ಅದಕ್ಕಾಗಿ ಸಚಿವರು ಓಡಾಡುತ್ತಾರೆಂದರೆ ಸಚಿವರು ನಿಂತು ತೆಗೆಸಬೇಕೆಂದು ಹೇಳಿದಂತಾಯಿತು. ಶಾಲೆಗೆ ವಿದ್ಯಾ ಇಲಾಖೆ ಮುಖ್ಯಾಧಿಕಾರಿಗಳು ಬರುತ್ತಾರೆ ಹೋಗುತ್ತಾರೆ. ನಮ್ಮ ಹುಡುಗರು ಪಾಠ ಕಲಿತಿಲ್ಲ ಎಂದು ಪೋಷಕರು ಹೇಳಿದರೆ ಅದಕ್ಕೆ ಯಾರು ಹೊಣೆ? ಇದಕ್ಕೆ ಕಾರಣವನ್ನು ಶಾಲಾ ಉಪಾಧ್ಯಾಯರಲ್ಲಿ ಕೇಳದೇ ಮುಖ್ಯಾಧಿಕಾರಿಗಳನ್ನು ಕೇಳಿದರೆ ಹೇಗೆ?

ಆದ್ದರಿಂದ ಇಂತಹ ಸಣ್ಣ ವಿಚಾರಕ್ಕೆಲ್ಲ ಮಂತ್ರಿಗಳ ಹೆಸರನ್ನು ತರುವುದು ಬಿಟ್ಟು ಪುರಸಭೆ ಅಧ್ಯಕ್ಷರಿಗೆ ನಿಮ್ಮ ಪುಕಾರನ್ನು ತಿಳಿಸಿ ಜಾಗವನ್ನು ಸ್ವಚ್ಛ ಮಾಡಿಸಿ ಮತ್ತು ಪುರಸಭೆಯೊಡನೆ ಸಹಕರಿಸುವಿರೆಂದು ಆಶಿಸುತ್ತೇನೆ.

ಶೃಂಗೇರಿ. **ಎಂ. ಎಸ್. ಗಣೇಶ್.**

ಗೋಕಾಕ್ ವರದಿ: ಒಂದು ಸಲಹೆ

ಮಾನ್ಯರೆ,

ಗೋಕಾಕ್ ವರದಿ ಕುರಿತು ನಿಮ್ಮ ಸಂಪಾದಕೀಯ ಲೇಖನ ಸಮಯೋಚಿತವಾಗಿದೆಯೆಂದು ನನಗೆ ಅನಿಸಿತು. ಭಾಷಾ ಕಲಿಕೆಯ ಬಗ್ಗೆ ನನ್ನ ಅಭಿಪ್ರಾಯಗಳನ್ನು 'ದೀವಟಿಗೆ'ಯ ಓದುಗರ ಮುಂದಿಡಲು ಪ್ರಯತ್ನಿಸಿದ್ದೇನೆ.

ಬರೀ ಭಾಷೆಯ ಕಲಿಕೆಗೆ ೩೦೦ ಅಂಕದ ಹೊರೆ ಯದ್ವಾ ತದ್ವಾ ಆಗುತ್ತದೆ. ಪ್ರಾಯೋಗಿಕ ಹಾಗೂ ಹೊರಾಂಗಣ ಕಲಿಕೆಗೆ ಹೆಚ್ಚು ಅವಕಾಶ ಕೊಟ್ಟರಾದರೂ ನಿರುತ್ಸಾಹದ ಮುದ್ದೆಯಾಗಿ ಕೂತಿರುವ ವಿದ್ಯಾರ್ಥಿ ಸಮೂಹದಲ್ಲಿ ಒಂದಿಷ್ಟು ಚೈತನ್ಯ ಸಂಚರಿಸೀತು.

ಕರ್ನಾಟಕ ಯಾರ ಸ್ವತ್ತೂ ಅಲ್ಲದಿದ್ದರೂ ಭಾವನಾತ್ಮಕವಾಗಿ ಅದು ನಮ್ಮದು. ಕನ್ನಡಿಗರದು. ತಮ್ಮ ರಾಜಧಾನಿಯಲ್ಲೇ ತಾವು ಅಲ್ಪ ಸಂಖ್ಯಾತರಾಗುವುದನ್ನು ಪ್ರಪಂಚದಲ್ಲಿ ಯಾವ ಜನ ಸಹಿಸಿಯಾರು? ನಗರಗಳ ಶ್ರೀಮಂತ ವರ್ಗ, ಅಧಿಕಾರಿವರ್ಗ ಮತ್ತು ರಾಜಕೀಯ ವರ್ಗಗಳ ಮಿತಿಯಿಲ್ಲದ, ಅಮಾನುಷವಾದ ಸ್ವಾರ್ಥದ ಕಾರಣ ಕನ್ನಡಿಗರಿಗೆ ಇಂಥದೊಂದು ವಿಚಿತ್ರ ಪರಿಸ್ಥಿತಿ ಎದುರಾಗಿದೆ.

ಕನ್ನಡವನ್ನು ಏಕೈಕ ಪ್ರಥಮ ಭಾಷೆ ಮಾಡಿದರೆ ಬೇರೆ ಭಾಷೆಯವರಿಗೆ ಭಾಷೆಯ ಕಲಿಕೆಯಲ್ಲಿ ತಾರತಮ್ಯವಾಗುತ್ತದೆ ಎಂಬ ವಾದವಿದೆ. ಆದರೆ ನಿಜವಾಗಿ ಅಂಥ ದೊಡ್ಡ ಭೇದವೇನೂ ಆಗುವುದಿಲ್ಲ. ಹಾಗೆ ಚೂರುಪಾರು ಅನನುಕೂಲತೆ ಯಾವ ರೀತಿಯ ಸೂತ್ರ ರೂಪಿಸಿದರೂ ಆಗಿಯೇ ಆಗುತ್ತೆ. ಶೇ. ೯೦ ಕ್ಕೂ ಹೆಚ್ಚು ಜನರಿಗೆ ಉಪಯೋಗ ಅಥವಾ ಆಶೋತ್ತರಗಳ ಈಡೇರಿಕೆ ಆಗುವುದಿದ್ದರೆ ಪ್ರಪಂಚದ ಎಲ್ಲಾ ಕಡೆ ಎಲ್ಲಾ ಕಾಲಗಳಲ್ಲೂ ಇಷ್ಟು ಸಣ್ಣ ತ್ಯಾಗವನ್ನು ಯಾರೂ ನಿರಾಕರಿಸಿಲ್ಲ.

ನನಗನ್ನಿಸುವಂತೆ ಭಾಷಾಸೂತ್ರ ಹೀಗೆ ಇರಬಹುದು:– **ಪ್ರಥಮ ಭಾಷೆ:** ಕನ್ನಡ ಮಾತ್ರ. ಇದಕ್ಕೆ ಅಂಕಗಳು ನೂರೈವತ್ತು ಆಗಬಹುದು. ಏಕೆಂದರೆ ಇತ್ತೀಚಿನವರೆಗೂ ನೂರೈವತ್ತು ಅಂಕ ಇದ್ದದ್ದು. ಆಗಲೂ ಗದ್ಯ, ಪದ್ಯ, ವ್ಯಾಕರಣ, ಉಪಪಠ್ಯ ಮುಂತಾಗಿ ಎಲ್ಲ ರೀತಿಯ ಪಠ್ಯ ವಿಷಯಗಳೂ ಇರುತ್ತಿದ್ದವು. [ಆದರೆ, ಕೂಲಂಕಷವಾಗಿ ವಿವೇಚಿಸಿರುವ ಗೋಕಾಕ್ ವರದಿ ಹೇಳುವಂತೆ ೧೫೦ ಅಂಕಗಳೇ ಹೆಚ್ಚು ಸಮಂಜಸವಿರಬಹುದು.] **೨ನೇ ಭಾಷೆ:** ಐಚ್ಛಿಕ. ಅಂಕಗಳು ೧೦೦. ಮಾತೃಭಾಷೆ, ಇಂಗ್ಲಿಷ್, ಸಂಸ್ಕೃತ, ಹಿಂದಿ – ಯಾವುದಾದರೂ ಆಗಬಹುದು.

ಈ ಎರಡೂ ಪರೀಕ್ಷೆಗೆ ಕಡ್ಡಾಯ.

೩ನೇ ಭಾಷೆ: ಈ ವರೆಗೆ ೩ನೇ ಭಾಷೆಯಾದ ಹಿಂದಿಗೆ ಇದ್ದಂಥದೇ ಸ್ಥಾನ ಇದಕ್ಕೆ. ಅಂದರೆ ಪರೀಕ್ಷೆಗೆ ಕಡ್ಡಾಯವಿಲ್ಲ. ಆದರೂ ಮೊದಲೆರಡು ಭಾಷೆಗಳಲ್ಲಿ ಉತ್ತೀರ್ಣತಾ ಮಟ್ಟ ಬರದಿದ್ದರೆ ಇದು ಲೆಕ್ಕಕ್ಕುಂಟು— ಮೊದಲೆರಡೂ ಫೇಲಾಗಿ ಇದರಿಂದ ಒಟ್ಟು ಅಂಕ ಉತ್ತೀರ್ಣತಾ ಮಟ್ಟ ಮುಟ್ಟಿದರೆ ಪಾಸು; ಅವೆರಡೂ ಫೇಲಾಗಿ ಇದೂ ಫೇಲ್ ಆದರೆ ಒಟ್ಟು ಭಾಷಾ ವಿಭಾಗದಲ್ಲಿ ಫೇಲ್. ಈ ಮೂರನೇ ಭಾಷೆಗೆ ಅಂಕಗಳು ನೂರಾದರೂ ಆಗಬಹುದು.

ಇದು ಯಾಕೆಂದರೆ ಮಾತೃಭಾಷೆ, ಇಂಗ್ಲಿಷ್, ರಾಷ್ಟ್ರಭಾಷೆ, 'ದೇವಭಾಷೆ'— ಹೀಗೆ ಯಾವ ಭಾಷೆಯ ಮೇಲಾದರೂ ನಿಜವಾದ ಆಸಕ್ತಿ ಇರುವವರು ಮಾತ್ರ— ಪರೀಕ್ಷೆಗೆ ಕಡ್ಡಾಯವಲ್ಲದಿದ್ದರೂ— ಕಲಿಯುತ್ತಾರೆ.

ಈ ಸೂತ್ರದಿಂದ ಕನ್ನಡ ಕಡ್ಡಾಯ ಪ್ರಥಮ ಭಾಷೆಯಾಗುತ್ತದೆ. ಇಂಗ್ಲಿಷ್ ಅಥವಾ ಮಾತೃಭಾಷೆಯ ಕಲಿಕೆಗೂ ಸರಿಯಾದ ಅವಕಾಶ ಸಿಗುತ್ತದೆ. ಇವರ ಮೇಲೆ ಇನ್ನೂ ಕಲಿಯುವ ಆಸಕ್ತಿ, ಅವಶ್ಯಕತೆ ಉಳ್ಳವರಿಗೂ – ಬೇರೆಯವರಿಗೆ ಹೊರೆ, ಭೇದ ಆಗದಂತೆ – ಅವಕಾಶ ಸಿಗುತ್ತದೆ.

ನ. ರಾ. ಪುರ. — 'ವಿಮರ್ಶಕ'.

ಸೋಲು

ಪರೀಕ್ಷೆಯ ಹೊ(ಕೊ)ಠಡಿಯಲ್ಲಿ ಈಜಾಟ ಆಡಿದರೆ
ಸ್ಟೂಡೆಂಟೇ ಸೋಲು ನಿನಗೇ, ಸೋಲು ನಿನಗೇ।
ಸೋತವನು ನೀನೆಂದು ಜನರೆಲ್ಲ ಜರಿಯುವರು
ವರ್ಷವೆಲ್ಲಾ ಹಾಳು ಕೊನೆಗೆ, ಹಾಳು ಕೊನೆಗೆ॥

ಮೊದಲಿರಲಿ ಇರದಿರಲಿ, ಅಭ್ಯಾಸವು ಮನೆಯಲಿರಲಿ
ಸ್ಟೂಡೆಂಟೇ ನಿನ ಯತ್ನವೆ ನಿನಗೆ ಬಲು।
ಪ್ರಯತ್ನದ ಮೊಗ್ಗೊಂದು ಹೂವಾಗಿ ಅರಳಿದರೆ
ಪಾಸುಗಳ ಸಾಲು ಸಾಲು, ಪಾಸುಗಳ ಸಾಲು ಸಾಲು॥

ಬರದಿರಲಿ ಬರುತಿರಲಿ ಅಭ್ಯಾಸಕೆ ಬೆಲೆಯಿರಲಿ
ಇರಲಿ ನಿನ ಕಲಿಕೆಯು ನೂರು।
ಪಾಠದ ವೇಳೆಯಲಿ ಕಿವಿಮುಚ್ಚಿ ಕೇಳದಿರೆ
ಫಲಿತಾಂಶ ಚೂರು ಚೂರು, ಫಲಿತಾಂಶ ಚೂರು ಚೂರು॥

ಕೃಷ್ಣ ಶೆಟ್ಟಿ, ಕೊಪ್ಪ.

ಗೋಕಾಕ್ ವರದಿ ಸಭೆ

(೧ನೇ ಪುಟದಿಂದ)

"ಅಲ್ಪಸಂಖ್ಯಾತರ ರಾಜ್ಯಾಂಗದತ್ತ ಹಕ್ಕಿಗೆ ವಿರುದ್ಧವಾಗಿ ವರದಿ ಏನೂ ಹೇಳಿಲ್ಲ. ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿ ನಡೆಸಬೇಕೆಂಬ ನಿರ್ದೇಶಕ್ಕೂ ಸಮಿತಿ ವಿರುದ್ಧವಾಗಿಲ್ಲ. ಬೇರೆ ರಾಜ್ಯಗಳಿಂದ ವರ್ಗವಾಗಿ ಬರುವ ನೌಕರರ ಮಕ್ಕಳಿಗೆ ಸ್ವಲ್ಪ ತೊಂದರೆಯಾಗಬಹುದು. ಆದರೆ ಶೇ. ೯೮ಕ್ಕೂ ಹೆಚ್ಚು ಜನರಿಗೆ ಅನುಕೂಲವಾಗುವಾಗ ಇಬ್ಬರು ಸ್ವಲ್ಪ ತೊಂದರೆಗೆ ಒಪ್ಪಲೇಬೇಕಾಗುತ್ತದೆ. ಅಂಥವರು ಪ್ರೌಢಶಾಲೆಯನ್ನು ಮಾತ್ರ ತಮ್ಮ ರಾಜ್ಯದಲ್ಲಿ ಮುಗಿಸಿಬರುವುದೋ ಏನಾದರೊಂದು ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ–ಎಂದು ಅಭಿಪ್ರಾಯಪಟ್ಟರು.

ಸರ್ಕಾರದ ಈಗಿನ ನಿರ್ಧಾರದಿಂದಾಗಿ ಕನ್ನಡದ ಮಕ್ಕಳು ಕಡ್ಡಾಯವಾಗಿ, ಅದೂ ೧೦೦ ಅಂಕಗಳಿಗೆ ಹಿಂದಿಯನ್ನು ಕಲಿಯಲೇಬೇಕಾಗುತ್ತದೆ. ಹೀಗೆ ೧೯೬೮, ೬೯, ೭೦ರಲ್ಲಿ ತೀವ್ರ ಚಳುವಳಿ ನಡೆಸಿ ಹಿಂದಿಯ ಕಡ್ಡಾಯ ಹೇರಿಕೆಯನ್ನು ತಪ್ಪಿಸಿ ಅದನ್ನು ಐಚ್ಛಿಕವಾಗಿಸಿದ್ದನ್ನು ಮುರಿದ. ಹಿಂಬಾಗಿಲಿನಿಂದ ಹಿಂದಿಯನ್ನು ಹೇರಿದಂತಾಗುತ್ತೆ.

ಅಲ್ಲದೆ, ಡಿ ಎಜಿಯುವರು ಹೇಳಿದಂತೆ, "ವಿಷಯದ ಕಲಿಕೆಗೆ ಕೊಡಬೇಕಾದ ಬೆಲೆಯನ್ನು ವಿಷಯದ ಹೊರಿಕೆಯಾದ ಭಾಷೆಗೆ" ಕೊಟ್ಟರೆ ಜ್ಞಾನಾರ್ಜನೆ ಹಿಂದೆ ಬೀಳುತ್ತದೆ. ಎಂದು ಶ್ರೀಯುತರು ವಿವರಿಸಿದರು.

ಈ ಪ್ರಶ್ನೆಯನ್ನು ಭಾವನಾತ್ಮಕವಾಗಿ ತೆಗೆದುಕೊಳ್ಳದೆ, ಕನ್ನಡದ ವಸ್ತುಸ್ಥಿತಿಯ ದೃಷ್ಟಿಯಲ್ಲಿ ಈಗಲೇ ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ, ಇನ್ನು ೧೦ ವರ್ಷಗಳಲ್ಲಿ ಕನ್ನಡ ಆಡಳಿತ ಭಾಷೆ ಮುಂತಾದ ಕನ್ನಡಿಗರ ಯಾವುದೇ ಬೇಡಿಕೆ ಈಡೇರದಂತಾಗುತ್ತದೆಂದು. ಅವರು ಎಚ್ಚರಿಸಿದರು.

"ಸರ್ಕಾರದ ಈಗಿನ ನಿರ್ಧಾರ ಕರ್ನಾಟಕದಲ್ಲಿ ಈಗ ಒಂದಾಗಿ, ಕನ್ನಡಿಗರಾಗಿ ಬಾಳುತ್ತಿರುವ ವಿವಿಧ ಭಾಷೀಯರಲ್ಲಿ ಒಡಕನ್ನು ನಿರ್ಮಿಸುತ್ತದೆ." ಎಂದು ಹ. ವ. ಗ ಪ್ರಭುಗಳು ಅಭಿಪ್ರಾಯ ಪಟ್ಟರು.

ಸಭೆ. ಮೆರವಣಿಗೆ ಶಾಂತಿಯುತವಾಗಿ ನಡೆದವು.

ಶೃಂಗೇರಿ ಸುದ್ದಿ

ಶ್ರಮದಾನ

ಸಮೀಪದ ಮಾರುತಿಬೆಟ್ಟದಲ್ಲಿ ಏ.೧೮ರಂದು ೨೦ಕ್ಕೂ ಹೆಚ್ಚು ಜನ ಯುವಕರು ಶ್ರಮದಾನ ಮಾಡಿ, ಮೇಲಿಂದ ಕೆಳಗಿನವರೆಗೆ ಮೆಟ್ಟಿಲು, ಆಂಜನೇಯನ ಕಟ್ಟೆ ಕಟ್ಟುವುದು, ಅಂಗಳ ಸ್ವಚ್ಛಗೊಳಿಸುವುದು ಮುಂತಾದ ಕೆಲಸಗಳನ್ನು ನೆರವೇರಿಸಿದರು

ಲಾರಿ ಗದ್ದೆಗೆ

ನೆಮ್ಮಾರಿನಲ್ಲಿ ಏ. ೨೬ ರಂದು ಲಾರಿಯೊಂದಕ್ಕೆ ಅಡ್ಡ ಬಂದ ಚಿಕ್ಕ ಹುಡುಗನೊಬ್ಬನನ್ನು ತಪ್ಪಿಸಲು ಹೋಗಿ ಲಾರಿ ಗದ್ದೆಗೆ ಹೋಗಿದೆ. ಯಾರಿಗೂ ಅಪಾಯವಾಗಿಲ್ಲ.

ಮಾರಿ ಹಬ್ಬ

ಏ. ೨೭ ರಂದು ಇಲ್ಲಿ ಮಾರಿದೇವಿಯ ಜಾತ್ರೆ ವಿಜೃಂಭಣೆಯಿಂದ ನಡೆಯಿತು.

ಸುದ್ದಿ ಸಂಗ್ರಹ

ಕಾಫಿ ಬೋರ್ಡ್ ಅಧ್ಯಕ್ಷರು

ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿದ್ದು ಇತ್ತೀಚೆಗೆ ನಿವೃತ್ತರಾಗಲಿರುವ ಎಸ್ ನರಸಿಂಹರಾವ್ ಅವರನ್ನು ಕಾಫಿ ಬೋರ್ಡಿನ ನೂತನ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಏಲಕ್ಕಿ ಮಂಡಳಿ ಕೇಂದ್ರ ಕಛೇರಿ ಕರ್ನಾಟಕದಲ್ಲಿ

ಕೇಂದ್ರ ಸರ್ಕಾರವು ಪ್ರತ್ಯೇಕ ಏಲಕ್ಕಿ ಮಂಡಳಿಯೊಂದನ್ನು ನೇಮಿಸಲಿದ್ದು. ಅದರ ಪ್ರಧಾನ ಕಚೇರಿ ಕರ್ನಾಟಕದಲ್ಲಿರುತ್ತದೆ.

ಕರ್ನಾಟಕ, ಕೇರಳ, ತಮಿಳುನಾಡು-ಈ ಮೂರು ರಾಜ್ಯಗಳಲ್ಲಿ ಏಲಕ್ಕಿ ಬೆಳೆಯುತ್ತದೆ. ಆದರೆ ರಾಜ್ಯದ ಏಲಕ್ಕಿ ಗುಣಮಟ್ಟದಲ್ಲಿ ಕಳಪೆಯಾಗಿದ್ದು, ಏಲಕ್ಕಿ ರಫ್ತಿನಲ್ಲೂ ರಾಜ್ಯ ಬಹಳ ಹಿಂದಿರುವುದರಿಂದ ಇಲ್ಲಿ ಅಭಿವೃದ್ಧಿ ಕಾರ್ಯ ಬಹಳ ಆಗಬೇಕಾಗಿದೆ. ಆದ್ದರಿಂದ ಮಂಡಳಿಯ ಪ್ರಧಾನ ಕಚೇರಿ ಇಲ್ಲಿ ಇರುತ್ತದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ರೇಷ್ಮೆ ಬೆಳೆ

(೨ನೇ ಪುಟದಿಂದ)

ಈಗಾಗಲೇ ಶೃಂಗೇರಿ, ಕೊಪ್ಪ, ನ. ರಾ ಪುರ, ತೀರ್ಥಹಳ್ಳಿ ತಾಲೂಕುಗಳಲ್ಲಿ ಹಲವಾರು ರೈತರು ರೇಷ್ಮೆ ಬೆಳೆಯುತ್ತಿದ್ದು, ಅರ್ಧ ಎಕರೆಯಿಂದ ಒಂದು ಎಕರೆವರೆಗೆ ಸೊಪ್ಪು ಬೆಳೆಸಲು ಸಾಧ್ಯವಾದರೆ ಒಂದು ಕುಟುಂಬಕ್ಕೆ ಧಾರಾಳ ಸಾಕು. ೧ ಎಕರೆಗೆ ವರ್ಷಕ್ಕೆ ಖರ್ಚೆಲ್ಲ ಕಳೆದು ಕನಿಷ್ಟ ಸಾವಿರದು ಸಾವಿರ ರೂ. ಗಳಿಸಬಹುದು.

X X X

ಇದಿಷ್ಟು ಒಂದು ಮುಖ. ಇನ್ನೊಂದು ಮುಖ ಇದೆ—ಈಗಾಗಲೇ ಬೆಳೆಯುತ್ತಿರುವವರು ಹಾಗೂ ಬೆಳೆ ಮುಂದುವರಿಸುವವರು ಅಗತ್ಯವಾಗಿ ಗಮನಿಸಬೇಕಾದ ಕೆಲವಂಶಗಳಿವೆ.

ಹುಂಬತನ ನಡೆಯದು

ನಮ್ಮ ಜನರಲ್ಲಿ ಹುಂಬತನ ಜಾಸ್ತಿ. (ಹೀಗೆ ಅಂದರೆ ಸಿಟ್ಟು ಬರಬಹುದು. ಆದರೂ ಅದು ನಿಜ.) ರೇಷ್ಮೆ ಬೆಳೆಗೆ ಅಪಾರ ಶಿಸ್ತು ಬೇಕು. ಮಾಡಬೇಕಾದ ಕೆಲಸವನ್ನು ಅದೇ ಹೊತ್ತಿಗೆ, ಅದೇ ರೀತಿ ಮಾಡಿದರೆ ಮಾತ್ರ ಸರಿಯಾದ ಪ್ರತಿಫಲ. "ಒಂದೊಪ್ಪತ್ತು ಹೆಚ್ಚು–ಕಮ್ಮಿ ಆದರೇನಂತೆ?" ಅನ್ನುವ ಮನೋಭಾವವಾದರೆ ಅಥವಾ ಚೂರು ಕ್ರಮ ತಪ್ಪಿದರೆ. ಅಥವಾ ಸ್ವಂತ ಬುದ್ಧಿಯನ್ನು ಅತಿಯಾಗಿ ಬಳಸಿದರೆ ಬೆಳೆ ಸೋಲುವುದು ಖಂಡಿತ.

ನಮ್ಮ ರೈತ ಸಮುದಾಯ ಈಗಾಗಲೇ ಪ್ರತಿಯೊಂದಕ್ಕೂ ಸರ್ಕಾರದ-ಅಂದರೆ ವಿವಿಧ ಇಲಾಖಾ ಅಧಿಕಾರಿಗಳ ಮರ್ಜಿಗೆ ಸಿಕ್ಕಿದೆ. ರೈತ ಉಸಿರಾಡಿದ್ದಕ್ಕೊಂದು ದಂಡ ಹಾಕುವುದು ಬಾಕಿ ಉಳಿದಿದೆ. (ಅದೂ ಎಲ್ಲ ಕಡೆ ಶುದ್ಧ ಗಾಳಿ ಇಲ್ಲ) ಇನ್ನು ಒಳ್ಳೆಯ ಲಾಭ ತರುವ ರೇಷ್ಮೆ ಬೆಳೆಯುವವ ಈ ಅಧಿಕಾರಿಗಳ ಮರ್ಜಿಗೆ ಸಿಕ್ಕರೆ ಉಳಿದಾನೆ? ಈಗಾಗಲೇ ಬೆಂಗಳೂರು, ಮೈಸೂರು ಮುಂತಾದ ಜಿಲ್ಲೆಗಳ ರೈತರು ಈ ಪರೋಪಜೀವಿ ಅಧಿಕಾರಶಾಹಿಯ ಹಾಗೂ ಗುತ್ತೇದಾರಿ ವ್ಯಾಪಾರಿಗಳ ಕರಾಮತ್ತಿನ ರುಚಿ ಕಾಣಲು ತೊಡಗಿದ್ದಾರೆ. ಆದ್ದರಿಂದ, ರೈತರ ಲಾಭಕ್ಕೆ ಇವರು ಕೈಯಿಕ್ಕಲು ಬರದಂತೆ ಅಥವಾ ರೈತರು ತೊಂದರೆಗೆ ಸಿಕ್ಕಿದಾಗ ಅದನ್ನು ತಮ್ಮ ಲಾಭಕ್ಕೆ ಬಳಸಲು ಇವರು ಪ್ರಯತ್ನ ಪಡದಂತೆ-ಬೆಳೆಗಾರರು ಈಗಿನಿಂದಲೇ ವ್ಯವಸ್ಥೆ ಮಾಡಿಕೊಳ್ಳದಿದ್ದರೆ ಮುಂದೆ ಮುಟ್ಟ ಮುಂಗಿದ ಮೇಲೆ ಸಾಧ್ಯವಿಲ್ಲ.

ಸಂಘ ಬೇಕು

ಆದ್ದರಿಂದ ಬೆಳೆಗಾರರ ಹಿತರಕ್ಷಣಾ ಸಂಘವೋ, ಸಹಕಾರೀ ಸಂಘವೋ ಏನಾದರೊಂದು ರಚಿಸಿಕೊಳ್ಳಬೇಕು. ಎಸ್. ಎಂ. ಭಿಡೆಯವರು ಶೃಂಗೇರಿಯಲ್ಲಿದ್ದಷ್ಟು ದಿನ ಆ ತಾಲೂಕಿನ ರೇಷ್ಮೆ ಬೆಳೆಗಾರರ ಸಂಘ ಚಟುವಟಿಕೆಯಾಗಿತ್ತಂತೆ. ಹೀಗೆ ಯಾರೋ ಒಬ್ಬ ವ್ಯಕ್ತಿಯ ಮೇಲೆ ಸಂಘಗಳು ಅವಲಂಬಿಸಬಾರದು; ಯಾರದೋ ಪ್ರತಿಷ್ಠೆಯ ಅಥವಾ ರಾಜಕೀಯದ ಕಾರಸ್ಥಾನವಾಗಬಾರದು; 'ದೊಡ್ಡವರ' 'ಸಣ್ಣವ'ರಿಗೆ ಆಜ್ಞೆ ಮಾಡುವ ಕಚೇರಿಗಳಾಗಬಾರದು.

ಹೀಗೆ ಎಲ್ಲ ವಿಷಯಗಳಲ್ಲೂ ಪರಸ್ಪರ ಸಹಕಾರ ಸ್ಥಾಪಿಸಿಕೊಳ್ಳಬೇಕು. ಯಾವುದೇ ಸಂದರ್ಭದಲ್ಲೂ ಸರ್ಕಾರದ ಊರುಗೋಲನ್ನು ಅವಲಂಬಿಸದೆ, ಒಗ್ಗಟ್ಟಿನ, ಸಹಕಾರದ ಶಕ್ತಿಯನ್ನು ಅವಲಂಬಿಸಬೇಕು. ಸರ್ಕಾರ ಮೊದಲು ಕೆಲವರಿಗೆ ಪುಕ್ಕಟೆ ಸಹಾಯ ಧನ ನೀಡಿತು; ಅನಂತರ ಬರೀ ಸಾಲ ಕೊಡುತ್ತಿದೆ; ಮುಂದೆ ಅದಕ್ಕೂ ಸಂಚಕಾರ ಬಂದರೆ ಬೆಳೆಗಾರ ನೆಲಕಚ್ಚುವ ಹಾಗೆ ಆಗಬಾರದು.

ಇದಕ್ಕೆ-ಪ್ರಥಮ ಹುಂಬತನ ಬಿಡಬೇಕಾಗುತ್ತೆ; ಕೆಲವೇ ಮಂದಿ ಬೇರೆಯವರಿಗಿಂತ ಹೆಚ್ಚು ಪ್ರಯೋಜನ ಪಡೆಯಬೇಕೆನ್ನುವ ಸ್ವಾರ್ಥಕ್ಕೆ ಕಡಿವಾಣ ಹಾಕಬೇಕಾಗುತ್ತೆ; ಸಂಘಕ್ಕೆ ಕೊಟ್ಟು, ಅದನ್ನು ಬೆಳೆಸಿ, ಚೈತನ್ಯ ಬರಿಸಿ ಎಲ್ಲರೂ ಒಟ್ಟಾಗಿ ಪ್ರಯೋಜನ ಪಡೆಯಬೇಕಾಗುತ್ತೆ. ಬಹುಶಃ ಇಂಥ ಪ್ರಜ್ಞಾವಂತ ಪ್ರಯತ್ನ ಈವರೆಗೆ ಅಷ್ಟಾಗಿ ನಡೆದಿಲ್ಲ. ನಮ್ಮ ರೈತರು ಇಲ್ಲಿ ಮೇಲ್ಪಂಕ್ತಿ ಹಾಕಲಿ.

ನ. ರಾ. ಪುರ ಭೂ. ಅ. ಬ್ಯಾಂಕ್ ಸಾಲ ವಸೂಲಿ ಪ್ರಗತಿ

ನ. ರಾ. ಪುರ: ಈಚೆಗಷ್ಟೇ ಸುವರ್ಣ ಮಹೋತ್ಸವ ಆಚರಿಸಿದ ನ. ರಾ. ಪುರ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಸಾಲ ವಸೂಲಿಯಲ್ಲಿ ೧೯೮೦-೮೧ ಕ್ಕಿಂತ ೮೧-೮೨ ರಲ್ಲಿ ಶೇ. ೧೨ರಷ್ಟು ಹೆಚ್ಚು ಪ್ರಗತಿ ಸಾಧಿಸಿದೆಯೆಂದು ಬ್ಯಾಂಕಿನ ಕಾರ್ಯದರ್ಶಿ ಶಾಂತ ಕುಮಾರ್ ತಿಳಿಸಿದ್ದಾರೆ.

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ:
ಸಿರಿಮನೆ ನಾಗರಾಜ್
ಅಚ್ಚು: ನೇಸರ ಮುದ್ರಣ, ಕೊಪ್ಪ

ಹಳೇ ನಾಟ ಮಾರಾಟಕ್ಕಿದೆ

ಹಳೇಮನೆಯ ನಾಟ ಕ್ರಯಕ್ಕೆ ಕೊಡಲ್ಪಡುತ್ತೆ. ಬೇಕಾದವರು ಕೆಳಗಿನ ವಿಳಾಸದಲ್ಲಿ ವಿಚಾರಿಸಬಹುದು.

ಜೆ. ಪಿ. ನೀಲಕಂಠ ಭಟ್ಟ,
ಹರಿಹರಪುರ ಅಂಚೆ.

ತಲಮಕ್ಕಿ ಗ್ರಾಮ ಪಂಚಾಯ್ತು ಕಛೇರಿ

ಹರಾಜು ಪ್ರಕಟಣೆ

ದಿನಾಂಕ 6-5-82ನೇ ಗುರುವಾರ ಸಂಜೆ 5 ಗಂಟೆಗೆ ತಲಮಕ್ಕಿ ಗ್ರಾಮ ಪಂಚಾಯ್ತಿ ಕಛೇರಿಯಲ್ಲಿ ಕುದ್ರೆಗುಂಡಿ ಪ್ರಯಾಣಿಕರ ತಂಗುದಾಣದ ಮಾರಾಟ ಮಳಿಗೆಯನ್ನು ಬಹಿರಂಗವಾಗಿ ಹರಾಜು ಮಾಡಲಾಗುವುದು. ಇಷ್ಟವುಳ್ಳವರು ಈ ಬಗ್ಗೆ ವಿವರಗಳನ್ನು ಪಂಚಾಯಿತಿ ಕಾರ್ಯಾಲಯದಲ್ಲಿ ಪಡೆಯಬಹುದು.

ಅಧ್ಯಕ್ಷರು ಮತ್ತು ಸದಸ್ಯರು,
ತಲಮಕ್ಕಿ ಗ್ರಾಮಪಂಚಾಯ್ತಿ,
ಕುದ್ರೆಗುಂಡಿ.